
ಕವಿತೆ



ಬಿದಲೋಟಿ ರಂಗನಾಥ್

ಕಲೆ:ನಂಜುಂಡಸ್ವಾಮಿ

# ಮೈ ನರೆದ ಹಕ್ಕಿಯ ಕನಸು



ನೀನು ಕೊಯ್ದ ಕನಸುಗಳು
ಕೊನರಿ ಚಂದ್ರನ ಎದೆ
ಮುಟ್ಟುವಾಗ
ಗೆದ್ದಲ ಹುಳುವಿನ ನಾಲಿಗೆ ಮೇಲೆ
ನಿನ್ನದೇ ಹೆಸರಿನ ಹಾಡು!

ಎಂದೋ ಮುಟ್ಟಿದ ಕಾಲ್ಗೆಜ್ಜೆ
ಇನ್ನೂ ಉಸಿರಾಡುವ ಸದ್ದು
ಕಾಣುವ ರೂಪಕೆ
ಕಾಣದ ಬೆಳಕಿನ ಕಣ್ಣು

ಆಸೆಯ ಮೇಲಿನ ಗುಡಿಸಲು ಕೆಡವಿದ ನೀನು
ನೆರಳಿಲ್ಲದೆ ಅಲೆದೆ
ಮುಖವ ಹುಡುಕುತ
ಸುಡುವ ಮನಸು ಕಾಲಿಲ್ಲದೆ ನಡೆದು
ಕಣ್ಣ ಪಾಪೆಯ ನಿನ್ನದೇ ಚಿತ್ರಕೆ ಬಣ್ಣಹತ್ತಲಿಲ್ಲ

ಸೀರೆ ಸೆರಗಿನ ಮೇಲೆ ಬರೆದ ಕವಿತೆ
ಬಾಯಿಬಿದ್ದವರ ಕನಸುಗಳ ಹೊಲಿಯುತ್ತಿದೆ
ನಡೆದು ಹೋದ ದಾರಿಯ ಮೇಲಿನ ಬಿಕ್ಕಳಿಕೆ
ಇನ್ನೂ ಕೇಳುತ್ತಿದೆ...

ನೀನೆ ಕಿತ್ತು ಕೊಟ್ಟ ಭಾವರೆಕ್ಕೆಯು
ಬೆಳದಿಂಗಳ ಕಣ್ಣುಗಳನ್ನು ಕಡೆಯುತ್ತಿದೆ
ಸೋತ ನೆಲದ ಕೋಲು
ಬದುಕಿನ ಪಾಠ ಕಲಿಸಿದೆ
ನೀನಿಲ್ಲವೆಂದವರ ಎದುರು

ನಿನ್ನದೇ ಕವಿತೆಯ ಉಸಿರಾಟದ ಸದ್ದು ಕೇಳಿ
ಮೋಡ ಸೀಳಿ ಬಂದ ಚುಕ್ಕಿ
ಕತ್ತಲೆ ದಾರಿಯ ಕೈ ದೀಪವಾಗಿದೆ

ಮೌನದಲೇ ಕೊಂದ ಆ ನೋಟ
ಎದೆಯ ಹಲಗೆಯ ಮೇಲಿನ ಚಿತ್ರವಾಗಿ
ಸುಡುವ ಹೆಜ್ಜೆಯ ಸಪ್ಪಳದ ಮೇಲಿನ
ಗಂಟು ಬಿಚ್ಚುವಾಗ...
ಮೈನರೆದ ಹಕ್ಕಿಯ ಕನಸು
ನಗುವ ಬೆಳದಿಂಗಳಾಗಿದೆ.